ಸರ್ಕಾರಿ ಪ್ರೌಢ ಶಾಲೆ ,ಸೂನಗಹಳ್ಳಿ ,ಮಂಡ್ಯ ದ ವಲಯ ,ಮಂಡ್ಯ

ತರಗತಿ ;-9 ವಿಜ್ಞಾನ - ಎರಡನೇ

ಸಂಕಲನಾತ್ಮಕ ಪರೀಕ್ಷೆ ಅಂಕಗಳು;- 80

I.ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆಯ್ದು ಬರೆಯಿರಿ . 1*8=8

1.ನಮ್ಮ ದೇಹಕ್ಕೆ ಶಕ್ತಿಯನ್ನುಒದಗಿಸುವ ಆಹಾರದ ಘಟಕ----------

a)ವಿಟಮಿನ್‌ಗಳು b) ಪ್ರೋಟಿನ್ ಗಳು c) ಲಿಪಿಡ್ ಗಳು d) ಕಾರ್ಬೋಹೈಡ್ರೇಟ್ ಗಳು

2.----------ಇದು ನೈಸರ್ಗಿಕ ಸಂಪನ್ಮೂಲಗಳಿಗೆ ಉದಾಹರಣೆಯಾಗಿಲ್ಲ.

a) ಗಾಳಿ b) ಪೆಟ್ರೋಲ್ c) ನೀರು d) ಬೆಳಕು.

3. ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಪರಮಾಣುವನ್ನು ಗುರುತಿಸಿ .

a) H b) Ne c) Na d) Li

4. ಜೀವಕೋಶದ ಪ್ರೋಟಿನ್ ಕಾರ್ಖಾನೆ----------

a) ಲೈಸೋಸೋಮ್ b) ಕ್ಲೋರೋ ಪ್ಲಾಸ್ಟ್ c) ರೈಬೋಸೋಮ್ d) ಮೈಟೋಕಾಂಡ್ರಿಯಾ .

5. ಒಂದು ಕಾಯವು ಸ್ವತಂತ್ರವಾಗಿ ಎತ್ತರದಿಂದ ಕೆಳಕ್ಕೆ ಬೀಳುವಾಗ ಅದರ ----------ಶಕ್ತಿ ಕ್ರಮೇಣ ಇಳಿಮುಖವಾಗಿ ಶೂನ್ಯವಾಗುತ್ತದೆ.

a) ಪ್ರಚ್ಛನ್ನ ಶಕ್ತಿ b) ಚಲನಶಕ್ತಿ c) ಸ್ನಾಯುಶಕ್ತಿ d) ವಿದ್ಯುತ್ ಶಕ್ತಿ .

6. ಅಧಿಕ ಕ್ಷೀರ ಉತ್ಪಾದನೆಗಾಗಿ ಅಭಿವೃದ್ಧಿ ಪಡಿಸಿರುವ ತಳಿ ----------

a) ಜೆಸಿಕ b) ಕೆಂಪು ಸಿಂಧಿ c) ಸಾಹಿವಾಲ್ d) ನಾಟಿಹಸು .

7. ಸ್ನಾಯುಗಳನ್ನ ಮುಳೆಗಳಿಗೆ ಬಂಧಿಸುವ ಸಂಯೋಜಕ ಅಂಗಾಂಶ ----------

a) ಅಸ್ಥಿರಜ್ಜು b) ದುಗ್ಧರಸ c) ಅಡಿಪೋಸ್ d) ಸ್ನಾಯು ರಜ್ಜು .

8 . ಜಡತ್ವವನ್ನು ವಿವರಿಸುವುದು ಚಲನೆಯ ----------ನಿಯಮ.

a) ಒಂದನೇ b) ಎರಡನೇ c) ಮೂರನೇ d) ಯಾವುದು ಅಲ್ಲ.

II. **ಒಂದು ವಾಕ್ಯದಲ್ಲಿ ಉತ್ತರಿಸಿ**
1*8=8

9. ಉತ್ಪತನವನ್ನು ನಿರೂಪಿಸಿ

10 . ಅಡಿಪೋಸ್ ಅಂಗಾಂಶದ ಕಾರ್ಯ ತಿಳಿಸಿ

11 . ದೈನಂದಿನ ಜೀವನದಲ್ಲಿ ಪಶುಸಂಗೋಪನೆಯ ಮಹತ್ವವೇನು ?

12. ಚಲನೆಯ ಯಾವುದಾದರು ಎರಡು ಸಮೀಕರಣವನ್ನು ಬರೆಯಿರಿ .

13 . ನೀರಿನ ಅಣುವಿನಲ್ಲಿರುವ ಧಾತುಗಳು ಯಾವುವು ? ಅವುಗಳ ಪರಮಾಣು ಸಂಖ್ಯೆಗಳನ್ನ ಬರೆಯಿರಿ.

14. . ಶಬ್ದವು ಹೇಗೆ ಉತ್ಪತ್ತಿಯಾಗುತ್ತದೆ ?

15 . ಕೃತಕ ಉಪಗ್ರಹಗಳನ್ನು ಭೂಮಿಯಿಂದ ಉಡಾಯಿಸಿದಾಗ ಅವುಗಳು ಭೂಮಿಗೆ ಹಿಂತಿರುಗುವುದಿಲ್ಲ ,ಏಕೆ?

16 . ನಿಮ್ಮ ದರ್ಪಣದ ಯಾವುದಾದರು ಎರಡು ಉಪಯೋಗಗಳನ್ನ ಪಟ್ಟಿಮಾಡಿ ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ** .
2*8=16

17 .ವರ್ಣರೇಖನ ಎಂದರೇನು ? ಇದರ ಅನ್ವಯ ತಿಳಿಸಿ.

18. ವಿಸರಣೆ ಮತ್ತು ಅಭಿಸರಣೆ ನಡುವಿನ ವ್ಯತ್ಯಾಸ ತಿಳಿಸಿ.

19 . ಬೆಳೆಯ ಉತ್ಪಾದನೆಯ ನಿರ್ವಹಣೆಯಲ್ಲಿ ರಾಸಾಯನಿಕ ಗೊಬ್ಬರಗಳ ಅತಿಯಾದ ಬಳಕೆಯಿಂದ ಉಂಟಾಗುವ ಪರಿಣಾಮಗಳೇನು ?

20 .ರೇಸ್ ಕಾರೊಂದು ms^{-1} ಏಕರೂಪ ವೇಗೋತ್ಕರ್ಷವನ್ನು ಹೊಂದಿದೆ. ಪ್ರಾರಂಭಗೂಂಡ ೧೦ ಸೆಕೆಂಡ್ ಗಳ ನಂತರ ಅದು ಕ್ರಮಿಸಿದ ದೂರವೆಷ್ಟು ?

OR

.ಜವ ಮತ್ತು ವೇಗಕ್ಕಿರುವ ವ್ಯತ್ಯಾಸ ಪಟ್ಟಿಮಾಡಿ .

21. ವಿಶ್ವ ವ್ಯಾಪ್ತಿ ಗುರುತ್ವ ನಿಯಮವನ್ನು ನಿರೂಪಿಸಿ

22. ಕಾಕ್ಲಿಯಾ ಕಿವಿಯಾ ಯಾವ ಭಾಗದಲ್ಲಿರುತ್ತದೆ ? ಇದರ ಕಾರ್ಯವೇನು ?

23. ಪರಮಾಣುವಿನ ರಚನೆ ತೋರಿಸುವ ಚಿತ್ರ ಬರೆದು ಧನ ಮತ್ತು ಋಣಾತ್ಮಕ ಕಣವನ್ನು ಗುರುತಿಸಿ .

24. ಆರೋಗ್ಯ ಎಂದರೇನು ? ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅನುಸರಿಸಬೇಕಾದ ಸೂಕ್ತ ಕ್ರಮಗಳನ್ನು ಪಟ್ಟಿಮಾಡಿರಿ .

IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು ,ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .

3*9=27

25 . ಸಸ್ಯ ಜೀವಕೋಶದ ಚಿತ್ರ ಬರೆದು , ದ್ಯುತಿಸಂಶ್ಲೇಷಣೆಗೆ ಸಹಾಯ ಮಾಡುವ ಕಣದಂಗವನ್ನು ಗುರುತಿಸಿ .

26 .ನ್ಯೂರಾನ್ / ನರಕೋಶದ ಚಿತ್ರ ಬರೆದು ,ಅದರ ಕಾರ್ಯವನ್ನು ವಿವರಿಸಿ .

27 .ಜಡತ್ವ ಎಂದರೇನು ? ಈ ಕೆಳಗಿನವುಗಳನ್ನ ಅವುಗಳ ಜಡತ್ವದ ಆಧಾರದ ಮೇಲೆ ಏರಿಕೆ ಕ್ರಮದಲ್ಲಿ ಬರೆಯಿರಿ .

ಬೈಸಿಕಲ್ ಆಟಿಕೆ ಕಾರು , ಟಿಪ್ಪರ್ ಲಾರಿ ,ಕುದುರೆ ಗಾಡಿ .

[OR]

28 .ಚಲನಶಕ್ತಿ ಮತ್ತು ಪ್ರಚ್ಛನ್ನ ಶಕ್ತಿಗಿರುವ ವ್ಯತ್ಯಾಸ ತಿಳಿಸಿ .

29 .ಹೃದಯವು ಪ್ರತಿ ಬಡಿತಕ್ಕೆ ೧ j ನಷ್ಟು ಕೆಲಸ ಮಾಡುತ್ತದೆ . ೧ ನಿಮಿಷಕ್ಕೆ ೭೨ ಬಾರಿ ಹೃದಯದ ಬಡಿತವಿದ್ದರೆ ಹೃದಯದ ಸಾಮರ್ಥ್ಯವನ್ನು ಕಂಡುಹಿಡಿಯಿರಿ.

30 .ಮಾನವನ ಕಿವಿಯ ಚಿತ್ರವನ್ನು ಬರೆದು ಭಾಗವನ್ನು ಗುರುತಿಸಿ .

31 .ಕೆಳಗೆ ಕೊಟ್ಟಿರುವ ಸಂಯುಕ್ತಗಳ ಅಣುರಾಶಿಗಳನ್ನ ಕಂಡುಹಿಡಿಯಿರಿ'

a) H_2O b) $CaCl_2$ c) C_2H_6

32 .a)ಬೆಳಕಿನ ಪ್ರತಿಫಲನದ ನಿಯಮವನ್ನು ನಿರೂಪಿಸಿ

b) ಪೀನ ದರ್ಪಣದಲ್ಲಿ ಉಂಟಾಗುವ ಪ್ರತಿಬಿಂಬದ ಸ್ವಭಾವವನ್ನ ಬರೆಯಿರಿ.

33 .a) ನಿಮಗೆ ಬಹಳ ದೂರದಿಂದಲೇ ಬಿಸಿ ಆಹಾರದ ವಾಸನೆ ತಿಳಿಯುತ್ತದೆ ,ಆದರೆ ತಂಪಾದ ಆಹಾರದ ವಾಸನೆ ತಿಳಿಯಲು ನೀವು ಆಹಾರದ ಹತ್ತಿರ ಹೋಗಬೇಕು . ಏಕೆ ?

b) ದ್ರವ್ಯದ ಕಣಗಳ ಗುಣಲಕ್ಷಣಗಳು ಯಾವುವು ?

V .**ಈ ಕೆಳಗಿನ ಪ್ರಶ್ನೆಗಳಿಗೆ ,ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ** .

4*4=16

34 .ಈ ಕೆಳಗಿನವುಗಳಿಗೆ ಕಾರಣ ಕೊಡಿ

a) ಸೋಡಿಯಂ ಮತ್ತು ಪೋಟ್ಯಾಷಿಂ ಧಾತುಗಳನ್ನ ಸೀಮೆಎಣ್ಣೆಯಲ್ಲಿ ಸಂಗ್ರಹಿಸಿಟ್ಟಿರುತ್ತಾರೆ .

b) ನಿಂಬೆಹಣ್ಣಿನ ಉಪ್ಪಿನಕಾಯಿಯನ್ನ ಅಲ್ಯೂಮಿನಿಯಂ ಪಾತ್ರೆಯಲ್ಲಿ ಸಂಗ್ರಹಿಸಿಡಬಾರದು.

c) ಪ್ಲಾಸ್ಟಿಕ್ ನ್ನು ತಾಮ್ರದ ತಂತಿಯ ಹೊದಿಕೆಯಾಗಿ ಬಳಸುತ್ತಾರೆ.

d) ಕಬ್ಬಿಣಕ್ಕೆ Fe ಸಂಕೇತ ಬಳಸುತ್ತಾರೆ.

35 . ಈ ಕೆಳಗಿನವುಗಳನ್ನ ಹೆಸರಿಸಿ

a) ವಾಹತೆಯನ್ನ ಹೂಂದಿರುವ ಅಲೋಹ .

b) ದ್ರವ ರೂಪದ ಲೋಹ

c) ಗಾಳಿಯೊಂದಿಗೆ ವರ್ತಿಸಿ ಬೆಂಕಿಯನ್ನುಉತ್ಪತ್ತಿ ಮಾಡುವ ಅಲೋಹ.

d) ಅತೀ ಕಠಿಣವಾದ ಅಲೋಹ

36) .ಪ್ರಕೃತಿಯಲ್ಲಿನ ಜಲಚಕ್ರ ರೂಪುರೇಷೆಯ ಚಿತ್ರ ಬರೆಯಿರಿ ಮತ್ತು ಅದರ ಪ್ರಾಮುಖ್ಯತೆಯನ್ನು ಬರೆಯಿರಿ.

37) ಇವುಗಳನ್ನ ಬೇಪರ್ಡಿಸುವ ತಂತ್ರಗಳನ್ನ ಹೆಸರಿಸಿ

a) ಸೀಮೆಎಣ್ಣೆ ಮತ್ತು ಪೆಟ್ರೋಲ್ . b) ಮೊಸರಿನಿಂದ ಬೆಣ್ಣೆ. c) ಸಮುದ್ರದ ನೀರಿನಿಂದ ಉಪ್ಪು . d) ಉಪ್ಪಿನಿಂದ ಕರ್ಪೂರ.

[OR]

.ಈ ಕೆಳಗಿನ ಪರಮಾಣುಗಳಿಗೆ ಪರಮಾಣು ಸಂಕೇತ ಬರೆದು ಇಲೆಕ್ಟ್ರಾನಿಕ್ ವಿನ್ಯಾಸ ಬರೆಯಿರಿ.

ಬೆರಿಲಿಯಂ(4) ಕಾರ್ಬನ್(6) ಸೋಡಿಯಂ(11) ಸಿಲಿಕಾನ್(14)

ಈಥೈನ್ -C_2H_2 ನ ಮೋಲಾರ್ ರಾಶಿಯನ್ನ ಲೆಕ್ಕಾಚಾರ ಮಾಡಿ.

38) . a) ಏಕದಳ ಮತ್ತು ದ್ವಿದಳ ಸಸ್ಯಗಳಿಗೆ ಇರುವ ವ್ಯತ್ಯಾಸ ತಿಳಿಸಿ

b) ಜೀವಿಗಳ ಪ್ರಮುಖ ಸಾಮ್ರಾಜ್ಯಗಳನ್ನು ಹೆಸರಿಸಿ .ಪ್ರತಿಯೊಂದಕ್ಕೂ ಉದಾಹರಣೆ ಕೂಡಿ.

c) ಆಲದ ಮರದ ವೈಜ್ಞಾನಿಕ ಹೆಸರನ್ನ ತಿಳಿಸಿ.